ಅ) ಕುಂಬ್ರಿ ಮರಾಠಿ ಜನಾಂಗವನ್ನು ಗಿರಿಜನ ಪಂಗಡಕ್ಕೆ ಸೇರಿಸಲು ಕೋರಿ ಮನವಿ ಬಂದಿರುವುದಿಲ್ಲ.

ಆ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಕೆಲವೊಂದು ಜಾತಿಗಳನ್ನು ಸೇರಿಸುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಆದೇಶ ಸಂಖ್ಯೆ : ಸಕಕಾ126 ಎಸ್‌ಎಡಿ 88, ದಿನಾಂಕ : 5-1-91ರಲ್ಲಿ ಒಂದು ಸಮಿತಿ ರಚಿಸಲಾಗಿದ್ದು ಈ ಸಮಿತಿಯನ್ನು ಪುನರ್ ರಚಿಸಲು ಉದ್ದೇಶಿಸಿದೆ. ಕುಂಬ್ರಿ ಜನಾಂಗದವರಿಂದ ಮನವಿ ಬಂದಲ್ಲಿ ಸದರಿ ಪುನರಚಿತ ಸಮಿತಿಯ ಮುಂದೆ ಮಂಡಿಸಲಾಗುವುದು

ಇ) ಉದ್ಭವಿಸುವುದಿಲ್ಲ

ವಿಷಯ : ರಾಜ್ಯದಲ್ಲಿರುವ ವಿದ್ಯಾರ್ಥಿನಿಲಯಗಳ ಕುರಿತು

1472 (2010)-ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಸರ್ಕಾರವು 95 ಮತ್ತು 96ನೇ ಸಾಲಿನಲ್ಲಿ ಪ.ಜಾತಿ : ಪ. ವರ್ಗದ ಹೆಂಗಸರ ಮತ್ತು ಗಂಡಸರಿಗಾಗಿಪ್ರಾರಂಭಿಸಲಾದ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಆ) ಸರ್ಕಾರವು 1997-98ನೇ ಆರ್ಥಿಕ ಸಾಲಿನಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಅಂದಾಜು ಮಾಡಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಸರ್ಕಾರವು ಸಮಾಡ ಕಲ್ಯಾಣ ಇಲಾಖಾವತಿಯಿಂದ 1995 ಮತ್ತು 1996ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಬಾಲಕ ಬಾಲಕಿಯರಿಗಾಗಿ ಕೆಳಕಂಡಂತೆ ಒಟ್ಟಾರೆ 209 ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದೆ.

ಕ್ರ. ಸಂ.	ವಿದ್ಯಾರ್ಥಿ ನಿಲಯಗಳ ವಿವರ	1995-96 ಬಾಲಕ ರ.ವಿ. ನಿ.ಸಂ.	ಬಾಲಕಿಯರ ವಿ.ನಿ. ಸಂ.	ಒಟ್ಟು	1996-97 ಬಾಲಕ ರ.ವಿ. ನಿ.ಸಂ.	ಬಾಲಕಿಯರ ವಿ.ನಿ. ಸಂ.	ಒಟ್ಟು
1.	ಪ.ಜಾತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	93	14	107	24	2	26
2.	ಪ.ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ	15	4	19	-	-	-
3.	ಪ.ಜಾತಿ:ಪ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ.	30	3	33	23	1	24
	ಒಟ್ಟು	**138**	**21**	**159**	**47**	**3**	**50**

ಆ) 1997-98ನೇ ಸಾಲಿನಲ್ಲಿ 50 ಹೊಸ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಗುರಿ ಇರುತ್ತದೆ.

Subject : Reservation to SC/ST reg

1473 (2009)-Sri. H. Shivappa (Harihara)

Will the Minister for Social Welfare be pleased to state

a) Precentage of reservation preseribed by Government for SC/ ST in appointment Education and promotion

b) Whether there is any discrimination between Income Tax payers and economically most backward in reservation policy if not whether it has come to the notice of Government that the